ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವುಗಳು ಆಗ ಹೇಳಿದ ಪ್ರಕಾರ ನಮ್ಮ ವಿಚಾರವನ್ನು ತಗೆದು ಕೊಳ್ಳಬೇಕಾಗಿತ್ತು.

ಅಧ್ಯಕ್ಷರು.—ಮಂತ್ರಿಗಳು ಬಂದ ಕೂಡಲೇ ಅದನ್ನು ತೆಗೆದುಕೊಳ್ಳುತ್ತೇನೆ. ಈಗ ಅವರು ಪರಿಷತ್ತಿನಲ್ಲಿ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೀಗೆ ಹಲವು ಬಾರಿ ಆಯಿತು. ತಮ್ಮ ಮಾತಿಗೂ ಗೌರವ ಇಲ್ಲವೆ? ಸುಮ್ಮನೆ ಬರುತ್ತಾರೆ ಅಂದರೆ ಹೇಗೆ?

ಅಧ್ಯಕ್ಷರು.—ಇಲ್ಲಿ ಎಲ್ಲರ ಮಾತಿಗೂ ಗೌರವ ಇದೆ. ಸಚಿವರು ಪರಿಷತ್ತಿನಿಂದ ಬಂದ ಕೂಡಲೇ ತಮ್ಮ ವಿಚಾರ ಪ್ರಸ್ತಾಪ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟು ಸಲ ಅಧ್ಯಕ್ಷರೇ ಕಾಯುವುದು.

ಅಧ್ಯಕ್ಷರು.—ಇರಲಿ, ಕೌನ್ಸಿಲ್‌ಗೆ ಹೋಗಿದ್ದಾರಂತೆ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಒಂದ್ಸಲ ಛೀಪಾರಿ ಹಾಕಿ, ಸರಿಹೋಗುತ್ತದೆ.

ಅಧ್ಯಕ್ಷರು.—ತಪ್ಪಿದ್ದರೆ ಹಾಕುತ್ತೇನೆ. ಕೌನ್ಸಿಲ್‌ಗೆ ಹೋಗಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ಪದೇ ಪದೇ ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಖರ್ಗೆಯವರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಸನ್ಮಾನ್ಯ ಕಂದಾಯ ಸಚಿವರು ವಿಧಾನ ಪರಿಷತ್ತಿನಲ್ಲಿ ಉತ್ತರ ಹೇಳುತ್ತಿದ್ದಾರೆ. ಆ ಕಲಸ ಮುಗಿದ ತಕ್ಷಣ ನೇರವಾಗಿ ಇಲ್ಲಿಗೆ ಬರುವಂತೆ ಹೇಳಿ ಕಳಿಸಿದ್ದೇನೆ, ಅವರು ಬಂದ ತಕ್ಷಣ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೋದ ಸಲವೂ ಇದು ರೆವಿನ್ಯೂ ಮಿನಿಸ್ಟ್ರಿಗೆ ರೆಫರ್ ಆಗಿತ್ತು. ಆದರೆ ಇದರಲ್ಲಿ ಕ್ರಿಮಿನಲ್ ಕೇಸ್ ಸೇರಿದ್ದಿದ್ದರಿಂದ ಹೋಮ್ ಡಿಪಾರ್ಟ್‌ಮೆಂಟಿನವರ ಉತ್ತರ ಕೊಡಲಿ ಎಂದು ಮುಂದೆ ಹಾಕಿತ್ತು. ಈಗ ಅವರೂ ಕೊಡದಿದ್ದರೆ ಬೇರೆ ಯಾರಾದರೂ ಉತ್ತರ ಕೊಡಬಹುದಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ —ಪೂರ್ಣ ಮಾಹಿತಿ ಇರುವ ಮಂತ್ರಿಗಳೇ ಉತ್ತರ ಹೇಳಿದರೆ ಶೋಭಾಯಮಾನವಾಗಿರುತ್ತದೆ.

SRI M. MALLIKARJUNA KHARGE.—All in one.

SRI A. LAKSHMISAGAR.—Principle of natural justice is that you must give an opportunity to your adversary to meet the points.

ಹೊಸದುರ್ಗ ತಾಲ್ಲೂಕಿನ ಹೊಸಕಂದೂರು ಗ್ರಾಮದಲ್ಲಿ ಹಿಂದುಳಿದ ವರ್ಗದ ಜನರ ಜಮೀನಿನ ಮೇಲೆ ಆಕ್ರಮಣ ನಡೆಸಿ ದೌರ್ಜನ್ಯದಿಂದ ಅಲ್ಲಿರತಕ್ಕ ತಂಗಿನ ಸಸಿ ಮತ್ತಿತರ ಫಸಲುಗಳನ್ನು ನಾಶಮಾಡಿರುವುದರ ಬಗ್ಗೆ,

ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕಿನ ಹೊಸಕಂದೂರು ಗ್ರಾಮದ ಸರ್ವೆ ನಂ. ೪೫, ೪೬ರಲ್ಲಿ ಹಿಂದುಳಿದ ವರ್ಗದ ಜನರ ಸ್ವಾಧೀನದಲ್ಲಿದ್ದ ಜಮೀನಿನ ಮೇಲೆ ದಿನಾಂಕ ೧೯-೫-೧೯೮೮ ರಂದು ಆಕ್ರಮಣ ನಡೆಸಿ ದೌರ್ಜನ್ಯದಿಂದ ತೆಂಗಿನ ಸಸಿಗಳನ್ನು ಮತ್ತು ಇತರ ಫಸಲುಗಳನ್ನು ನಾಶಮಾಡಿರುವ ಬಗ್ಗೆ ಮಾನ್ಯ ಕಂದಾಯ ಯೋಜನಾ ಮತ್ತು ನೀರಾವರಿ ಮಂತ್ರಿಯವರ ಗಮನ ಸೆಳೆಯುತ್ತೇನೆ

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೆ, ಹೊಸದುರ್ಗ ತಾಲ್ಲೂಕು ಕಂದೂರು ಗ್ರಾಮದ ಸರ್ವೆ ನಂ. ೪೫

ಳಿಕೆ ಮೂಲತಃ ಗೋಮಾಳದ ಜಮೀನಾಗಿರುತ್ತದೆ. ಮೇಲ್ಕಂಡ ಸರ್ವೆ ನಂಬರುಗಳ ಒಟ್ಟು ವಿಸ್ತೀರ್ಣ ಈ ಕೆಳಕಂಡಂತೆ ಇರುತ್ತದೆ.

ಸರ್ವೆ ನಂ. ೪೫ರಲ್ಲಿ	...	೬೬ ಎಕರೆ ೩೮ ಗುಂಟೆ
ಸರ್ವೆ ನಂ. ೪೬ರಲ್ಲಿ	...	೯೪ ಎಕರೆ ೦೭ ಗುಂಟೆ

ದಿನಾಂಕ ೪-೯-೧೯೮೩ರಂದು ಉಪ ವಿಭಾಗಾಧಿಕಾರಿಗಳು ಸರ್ವೆ ನಂ. ೪೬ರ ಒಂದು ಭಾಗವನ್ನು ಗೋಮಾಳದಿಂದ ತೆಗೆಸಿ ನಿಯಮಾವಳಿಗಳ ಪ್ರಕಾರ ವಿತರಣೆ ಮಾಡಲು ಆದೇಶ ನೀಡಿದ್ದರು. ದಿನಾಂಕ ೩೧-೩-೧೯೮೫ರಂದು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ಉಪ ವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಈರಮಲ್ಲಪ್ಪ ಮತ್ತಿತರ ಮೂವರು ಗೊಲ್ಲರಹಟ್ಟಿ ಗ್ರಾಮಕ್ಕೆ ಸೇರಿದವರು ಸಲ್ಲಿಸಿದ ಮೇಲ್ಮನವಿಯ ತೀರ್ಪಿನಲ್ಲಿ ಗ್ರಾಮದ ಜಾನುವಾರುಗಳ ಸಂಖ್ಯೆಯನ್ನು ಗಮನಿಸಿದಲ್ಲಿ ಲಭ್ಯವಿರುವ ಗೋಮಾಳ ಸಾಕಾಗುವುದಿಲ್ಲವೆಂದು ಈ ದಿಸೆಯಲ್ಲಿ ಉಪ ವಿಭಾಗಾಧಿಕಾರಿಗಳವರು ಮಾಡಿರುವ ಆದೇಶ ಅಕ್ರಮ ಹಾಗೂ ಅನುಪೇಕ್ಷಣೀಯವೆಂದು ಅಭಿಪ್ರಾಯಪಟ್ಟು ಮೇಲ್ಮನವಿಯನ್ನು ಪುರಸ್ಕರಿಸಿ ದಿನಾಂಕ ೪-೯-೧೯೮೫ರ ಉಪ ವಿಭಾಗಾಧಿಕಾರಿಗಳ ಆದೇಶವನ್ನು ತಳ್ಳಿಹಾಕಿದ್ದಾರೆ. ಸರ್ವೆ ನಂ. ೪೬ರ ಜೊತೆಗೆ ಕುಂದೂರು ಗ್ರಾಮದ ಗೋಮಾಳ ಜಮೀನುಗಳಾದ ರೀಸರ್ವೆ ನಂ. ೪೫ರಲ್ಲಿ ಈ ಕೆಳಕಂಡಂತೆ ಜಮೀನುಗಳನ್ನು ಮಂಜೂರು ಮಾಡಿರುತ್ತಾರೆ.

ಸರ್ವೆ ನಂ. ೪೫ರಲ್ಲಿ ೫೧ ಜನರಿಗೆ ೬೫ ಎಕರೆ ೩೫ ಗುಂಟೆ
ಸರ್ವೆ ನಂ. ೪೬ರಲ್ಲಿ ೭೫ ಜನರಿಗೆ ೮೦ ಎಕರೆ ೧೦ ಗುಂಟೆ

ಮೇಲ್ಕಂಡ ಮಂಜೂರಾತಿಯನ್ನು ದಿನಾಂಕ ೧೬-೧೦-೧೯೮೧ರಂದು ಅಂದಿನ ತಹಸೀಲ್ದಾರ್‌ರವರು ಭೂ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಸುತ್ತೋಲೆಗಳಲ್ಲಿ ವಿಧಾಯಕವಾಗಿರುವ ಕಾರ್ಯ ವಿಧಾನವನ್ನು ಅನುಸರಿಸದೆ ಗ್ರಾಮಕ್ಕೆ ಗೋಮಾಳವಾಗಿ ಮೀಸಲಿರಿಸುವ ಜಿಲ್ಲಾಧಿಕಾರಿಗಳ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೆ ಮಂಜೂರು ಮಾಡಿದ್ದರು.

ಗ್ರಾಮದ ಜಾನುವಾರುಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಗೋಮಾಳವಾಗಿಲ್ಲದ ಸದರೀ ಜಮೀನುಗಳ ಭೂ ಮಂಜೂರಾತಿ ವಿರುದ್ಧ ಕುಂದೂರು ಗೊಲ್ಲರಹಟ್ಟಿ ಗ್ರಾಮಸ್ಥರು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ದಿನಾಂಕ ೩೦-೯-೧೯೮೪ರಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ಉಪ ವಿಭಾಗಾಧಿಕಾರಿಗಳಿಂದ ವರದಿ ಪಡೆದು ಪರಿಶೀಲಿಸಿ ವಿಶೇಷ ಜಿಲ್ಲಾಧಿಕಾರಿಗಳು ತಾರೀಖು ೬-೬-೧೯೮೬ರಂದು, ತಪ್ಪು ಮಾಹಿತಿ ಒದಗಿಸಿ ವಂಚನೆಯಿಂದ ರೀಸರ್ವೆ ನಂ. ೪೫ ಮತ್ತು ೪೬ರಲ್ಲಿ ಜಮೀನು ಮಂಜೂರಾತಿ ಪಡೆದಿರುವ ಮಂಜೂರುದಾರರಿಗೆ ನೋಟೀಸ್ ಕೊಟ್ಟು ೧೯೬೪ರ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಯ ನಿಯಮ ೨೫ರ ಪ್ರಕಾರ ಕ್ರಮ ತೆಗೆದುಕೊಳ್ಳಲು ಹೊಸದುರ್ಗ ತಾಲ್ಲೂಕು ತಹಸೀಲ್ದಾರ್‌ರವರಿಗೆ ನಿರ್ದೇಶನ ನೀಡಿದ್ದರು. ಅದರಂತೆ, ತಹಸೀಲ್ದಾರ್‌ರವರು ಮಂಜೂರಾತಿ ಪಡೆದಿರುವ ಎಲ್ಲಾ ೧೨೦ ಜನರಿಗೂ ಪ್ರತ್ಯೇಕವಾಗಿ ನೋಟೀಸ್ ಕೊಟ್ಟು ಸದರೀ ಕೆಲವು ಮಂಜೂರುದಾರರಿಂದ ಉತ್ತರ ಬಂದನಂತರ ಅವುಗಳನ್ನು ಪರಿಶೀಲಿಸಿ ಅವರಿಗೆ ಅವರ ಕುಟುಂಬ ವರ್ಗದವರಿಗೆ ಜಮೀನಿರುತ್ತದೆಂಬ ವಾಸ್ತವಿಕ ದೂರಕಿದ್ದರಿಂದಲೂ ಕೆಲವರು ಹೆಚ್ಚು ಆದಾಯವುಳ್ಳ ಸರ್ಕಾರೀ ನೌಕರರ ಸಂಬಂಧಿಗಳೆಂದು ತಿಳಿದುಬಂದಿದ್ದರಿಂದ ಸ್ವತಃ ಸಾಗುವಳಿಯನ್ನೇ ಮಾಡುತ್ತಿಲ್ಲವೆಂಬ ಅಂಶ ಕಂಡುಬಂದಿದ್ದರಿಂದ ತಪ್ಪು ಮಾಹಿತಿ ನೀಡಿ ಭೂ ಮಂಜೂರಾತಿ ಪಡೆದಿರುವರೆಂಬ ಅಂಶವನ್ನು ದೃಢಪಡಿಸಿಕೊಂಡು ತಾರೀಖು ೭-೧೨-೧೯೮೭ರಂದು ಸರ್ವೆ ನಂ. ೪೬ ಮತ್ತು ೪೫ರಲ್ಲಿ ಆಗಿರುವ ೧೪೦ ಎಕರೆ ೦೫ ಗುಂಟೆ ಜಮೀನಿನ ಭೂ ಮಂಜೂರಾತಿಯನ್ನು ತಹಸೀಲ್ದಾರ್‌ರು ರದ್ದುಪಡಿಸಿರುವರು ಭೂ ಮಂಜೂರಾತಿ ಕಾಲಕ್ಕೆ ಕುಂದೂರು ಗ್ರಾಮದಲ್ಲಿ ೮೯ ಜಾನುವಾರುಗಳಿದ್ದು ಸದರೀ ಗ್ರಾಮಕ್ಕೆ ೨೭೦ ಎಕರೆ ಗೋಮಾಳ ಬೇಕಾಗಿದ್ದಿತು. ಗೋಮಾಳವನ್ನು ಕಡಿಮೆ ಮಾಡಲು ಸಂಬಂಧಪಟ್ಟ ಮೇಲಧಿಕಾರಿಗಳ ಆದೇಶವನ್ನು ಪಡೆಯದೇ ಇದ್ದುದು ತಹಸೀಲ್ದಾರರು ಮಂಜೂರಾತಿಯನ್ನು ರದ್ದು ಮಾಡಲು ಮತ್ತೊಂದು ಕಾರಣವಾಗಿರುತ್ತದೆ.

ಉಪ-ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಬಾಕಿ ಇದ್ದ ವೇಳೆಯಲ್ಲಿ ಗೊಲ್ಲರಹಟ್ಟಿ ಗ್ರಾಮಕ್ಕೆ ಸೇರಿದ ಪೂಜಾರಿ ಗೋವಿಂದಪ್ಪ ಮತ್ತು ಇತರೇ ಇಬ್ಬರು ಹೊಸದುರ್ಗ ಮುನ್ಸೀಫ್ ನ್ಯಾಯಾಲಯದಲ್ಲಿ ಅಸಲು ದಾವೆಯನ್ನು ಸಲ್ಲಿಸಿದ್ದು ದಿನಾಂಕ ೧೮-೪-೧೯೮೮ರಂದು

ಮಂನ್ಸಿಫ್ ನ್ಯಾಯಾಲಯವು ಪಂಗಾಮಿ ನಿಷೇಧಾಜ್ಞೆಯನ್ನು ಅತಿಕ್ರಮಣದಾರರ ವ್ಯತಿರಿಕ್ತವಾಗಿ ನೀಡಿರುತ್ತದೆ. ನಿಷೇದ್ದಾಜ್ಞೆ ಜಾರಿಯಲ್ಲಿರುವಾಗಲೇ ದಿನಾಂಕ ೧೯-೫-೧೯೮೮ರಂದು ರಿಸರ್ವೆ ನಂ. ೪೫೫ರಲ್ಲಿನ ತೆಂಗಿನ ಮರಗಳು ಹಾಗೂ ಇತರೆ ಫಸಲನ್ನು ಹಾಳು ಮಾಡಲಾಗಿದೆ. ದಿನಾಂಕ ೨೮-೫-೧೯೮೮ರಂದು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಮೇಲ್ಕಂಡ ಮಂಜೂರಿದಾರರು ನಿಯಮಾವಳಿಗಳ ಪ್ರಕಾರ ಹಾಲಿ ಸಾಗುವಳಿದಾರರಾಗಿಲ್ಲದಿರುವುದರಿಂದ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ.

† ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೇ ಇದು ಬಡವರಿಗೆ ಆಗಿರತಕ್ಕಂಥ ಜಮೀನು. ಭೂ ಆಕ್ಟ್ ಪ್ರಕಾರ ಬಡವರು ಯಾರು ಸಾಗುವಳಿ ಮಾಡಿಕೊಂಡು ಇರಲಿಕ್ಕೆ ಕೊಟ್ಟಿದ್ದೀರೋ ಅವರು ಮಾತ್ರ ತೆಂಗಿನ ಸಸಿಗಳನ್ನು ಹಾಕಿಕೊಂಡಿರುವುದು. ಅವನ್ನು ಕಡಿದು ಹಾಕಿರುವುದಾಗಿ ತಿಳಿಸಿದ್ದೀರಿ. ಆದರೆ ಸರ್ಕಾರಿ ನೌಕರರು ಇರುತ್ತಾರೆ ಅವರಿಗೆ ಕೊಟ್ಟಿದ್ದೇವೆಂದೂ ಹೇಳಿದ್ದೀರಿ. ಸರ್ಕಾರಿ ನೌಕರ ಯಾರು ಎಂಬುದು ಗೊತ್ತಿಲ್ಲ. ೫೦೦ ಸಸಿಗಳನ್ನು ಕಡಿದು ಹಾಕಿರುವುದು ಬಡವರದು. ಭೂರಹಿತರಿಗೆ ಕೊಟ್ಟಿದ್ದು ಬಹಳ ಜನ ತೊಂದರೆಗೆ ಈಡಾಗಿದ್ದಾರೆ. ಸರ್ಕಾರದ ನೀತಿಯ ಮೇಲೆ ಪರಿಹಾರವನ್ನು ಅವರಿಗೆ ಕೊಡಬೇಕು. ಅಲ್ಲಿ ಮಾಡಿರತಕ್ಕಂಥ ಅನ್ಯಾಯ ಅಧರ್ಮವನ್ನು ಸರಿಮಾಡದೆ ಫಾಲ್ಸ್ ಫಿಗರ್ಸ್‌ನ್ನು ಕೊಟ್ಟುಬಿಟ್ಟಿದ್ದಾರೆ. ತಹಸೀಲ್‌ದಾರರು ಖಂಡಿತವಾಗಿಯೂ ಫಾಲ್ಸ್‌ಫಿಗರ್ಸ್‌ನ್ನು ಕೊಟ್ಟು ರಿಪೋರ್ಟ್ ಮಾಡಿದ್ದಾರೆ. ಅವರಿಗೆ ಏನು ಹಕ್ಕು ? ಅವರಿಗೆ ಇದರಿಂದ ಪಜಾ ಮಾಡಲಿಕ್ಕೆ ಹಕ್ಕಿಲ್ಲ. ಭೂಮಿ ಇದ್ದವರಿಗೆ ಈರೀತಿ ಪಜಾ ಮಾಡಿಲ್ಲ. ಭೂರಹಿತರಿಗೆ ತೊಂದರೆಯಾಗಿದೆ. ೪೦೦ ಸಸಿ ಇದ್ದ ಒಂದು ಎಕರೆಗೆ ಸುಮಾರು ೬ ಲಕ್ಷ ರೂಪಾಯಿಗಳ ಒಟ್ಟು ಪರಿಹಾರವನ್ನು ಕೊಡಬೇಕೆಂದು ನಾನಂ ಮಂತ್ರಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಆಗಿರತಕ್ಕಂಥ ಅನ್ಯಾಯವನ್ನು ರೈತರು, ಕೂಲಿಗಾರರು, ನೋಡಿ ಪೊಲೀಸಿಗೆ ರೀಶಿಯಲ್ಲಿ ಬಂದು ಗಲಾಟೆ ಮಾಡಿದ್ದಾರೆ. ತಹಸೀಲ್‌ದಾರರ ಆಫೀಸಿನ ಮುಂದೆ ಗಲಾಟೆ ಮಾಡಿದ್ದಾರೆ. ಈ ಪ್ರಕರಣ ನಡೆದು ಸುಮಾರು ೨೦ ದಿವಸಗಳಾಯಿತು. ಗಮನ ಸೆಳೆಯುವ ಸೂಚನೆ ಕೊಟ್ಟು ಡಿಸ್‌ಕಷನ್ ಮಾಡಬೇಕೆಂದು ಮಾನ್ಯ ರೆವಿನ್ಯೂ ಸಚಿವರನ್ನು ಕೇಳಿಕೊಂಡಿದ್ದೆ. ಆವರು ತಕ್ಷಣ ತೆಗೆದುಕೊಳ್ಳಲಿಲ್ಲ. ನಮ್ಮ ಕ್ಷೇತ್ರದಲ್ಲಿ ಜನರು ಬಹಳ ಹಾಹಾಕಾರ ಮಾಡುತ್ತಿದ್ದಾರೆ ಬಹಳ ವ್ಯಸನ ಪಡುತ್ತಿದ್ದಾರೆ. ಈರೀತಿ ಕಲ್ಪವೃಕ್ಷವನ್ನು ಕಡಿದುಹಾಕಿದ್ದಾರೆಂದರೆ ಅವರು ಯಾರು, ಅವನ ಮೇಲೆ ಪೊಲೀಸ್‌ನವರು ಏನು ಕ್ರಮ ತೆಗೆದುಕೊಂಡಿಲ್ಲ. ಮೊನ್ನೆದಿವಸ ೯-೬-೧೯೮೮ನೇ ಸರ್ವ ನಂಬರ್‌ನಲ್ಲಿ ನಿರುಗುಂದ ಎಂಬ ಹಳ್ಳಿಯಲ್ಲಿ ೧೨ ಎಕರೆಗೆ ಎಳ್ಳುಹಾಕಿದ್ದನ್ನು ಹರಗಿಸಿಬಿಟ್ಟಿದ್ದಾರೆ. ಇನ್ನಷ್ಟಕ್ಕೂ ಪೊಲೀಸ್‌ನವರು ಬಂದು ರಕ್ಷಣೆಯನ್ನು ಕೊಡಬೇಕು. ಆದರೆ ಇವರೇನೂ ಮಾಡುತ್ತಿಲ್ಲ. ಇವರನ್ನು ಮೊದಲು ನಮ್ಮ ಕ್ಷೇತ್ರದಿಂದ ಅಮಾನತ್ತಿನಲ್ಲಿಟ್ಟು ನೊಂದವರಿಗೆ ಅವರಿಗೆ ಪರಿಹಾರವನ್ನು ಕೊಡಬೇಕೆಂದು ಮಾನ್ಯ ರೆವಿನ್ಯೂ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ೧೬.೧.೧೯೮೮ರಲ್ಲಿ ಜಮೀನು ಮಂಜೂರು ಮಾಡಿರುತ್ತಾರೆ ಮಂಜೂರಾತಿ ಮಾಡಿರುವುದು ೧೬.೦೫ ಎಕರೆ ನಾವು ಒಪ್ಪಿಕೊಳ್ಳುತ್ತೇವೆ. ಅವರಿಗೆ ಪತ್ರಕ್ಕೆ ಕೊಟ್ಟಿಲ್ಲವೆಂದರೆ ಸರ್ಕಾರಿ ನೌಕರರಿಗೆ ಸಂಬಂಧಿಸಿದ್ದು. ಇಂಡಿಪೆಂಡೆಂಟ್ ಆಗಿದ್ದರೆ ಅದು ಬೇರೆ ಜೀರೆಯವರಿಗೆ ಸಂಬಂಧಿಸಲಾಗಿದೆ ಎಂದು ಕೆಲವರಿಗೆ ಗೊಮಾಳ ಇಲ್ಲವೆಂದು ಹೇಳುವುಗೆ. ಇಷ್ಟೇ ಸ್ವಾಮಿ. ಎಷ್ಟೋ ಸಂಸ್ಥೆಗಳಿಗೆ ಜಮೀನು ಕೊಟ್ಟಿದ್ದರಿಂದ ಅವರು ತೆಂಗಿನ ಮರಗಳನ್ನು ಹಾಕಿಕೊಂಡಿದ್ದರು ಆದರೆ ಪೊಜಿಷನ್ ತೆಗೆದು ಕೊಂಡಿಲ್ಲವೆಂದು ಹೇಳಿದ್ದರಿಂದ ಪೊಜಿಷನ್ ತೆಗೆದುಕೊಳ್ಳಬೇಕಾಗಿದೆ ಎಂದು ಆಪೀಲ್ ಹೋಗಿದ್ದಾರೆ ಇಂಥ ಸಮಯದಲ್ಲಿ ಹೋಗಿ ನಾನು ೫೦೦ ತೆಂಗಿನ ಮರಗಳನ್ನು ಕಡಿದು ಹಾಕಿದ್ದಾರೆ. ಅವರಿಗೆ ರಕ್ಷಣೆಸಕ್ಕ ಬಾನಿತ್ತು. ಅಲ್ಲಿ ಒಬ್ಬ

ಜನತಾಪಕ್ಷದ ನಾಯಕ. ಅವರ ಹೆಸರನ್ನೂ ಕೂಡ ಹೇಳಿದ್ದೀರಿ. ಯಾರೇ ಆಗಲಿ ಯಾವ ಪಾರ್ಟಿಯವರೇ ಇರಲಿ ಅವನು ದೃಷ್ಟ. ಸ್ವಾಮಿ ಅವನು ನಾಯಿಯನ್ನು ಕೂಡ ಕೆಚ್ಚಿದ್ದಾನೆ. ಯಜಮಾನನನ್ನು ರಕ್ಷಣೆ ಮಾಡಲು ನಾಯಿ ಅಡ್ಡಿಬಂದರೆ ಆ ನಾಯಿಯಂವನ್ನೇ ಕಚ್ಚಿದ್ದಾನೆಂದರೆ, ಎಷ್ಟು ಕೋಪ ಇತ್ತು. ಎಷ್ಟು ರಾಕ್ಷಸತ್ವ ಇತ್ತು ಎಂದು ಹೇಳಬೇಕಾಗುತ್ತದೆ. ಇಷ್ಟಾದರೂ ಕೂಡ ಏನು ತೊಂದರೆಯಾಗಿಲ್ಲವೆಂದು ಹೇಳುತ್ತಾರೆ ಎರಡು ಗಂಟೆಯಾದ ಮೇಲೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕಾರಿನಲ್ಲಿ ಬಂದು ಪಿಕ್‌ಅಪ್ ಕೊಟ್ಟಿದ್ದಾರೆ. ಇಷ್ಟೆಲ್ಲ ಕೊಟ್ಟ ಮೇಲೆ ೧೯೮೧ ರಲ್ಲಿ ಕೊಟ್ಟಿದ್ದನ್ನು ೧೯೮೪ ರಲ್ಲಿ ನೀವು ಅದನ್ನು ಕ್ಯಾನ್ಸಲ್ ಮಾಡುವುದು ನ್ಯಾಯವಲ್ಲ. ಅವರಿಗೆ ಅದನ್ನು ಖಾಯಂ ಮಾಡಬೇಕಾಗಿತ್ತು. ಗೋಮಾಳ ಇಲ್ಲವೆಂದು ೮ ವರ್ಷ ಆದ ಮೇಲೆ ಅದರಲ್ಲೂ ತೆಂಗಿನ ಮರಗಳನ್ನು ಬೆಳೆಸಿದ ಮೇಲೆ ಅವುಗಳನ್ನೆಲ್ಲ ಕಡಿದು ಹಾಕಿರುವುದು ತಪ್ಪು, ಆ ಜಮೀನನ್ನು ಅವರಿಗೆ ಬಿಟ್ಟು ಕೊಡಬೇಕೆಂದು ಮಂತ್ರಿಗಳನ್ನು ವಿನಂತಿ ಮಾಡುತ್ತೇನೆ. ಅಲ್ಲದೆ ಅವರಿಗೆ ಪರಿಹಾರವನ್ನು ಕೊಡಬೇಕು. ತೆಂಗಿನ ಮರಗಳನ್ನು ಕಡಿದಿದ್ದಾರೆ. ಪಪ್ಪಾಯಿ ಗಿಡ ಕಡಿದಿದ್ದಾರೆ, ಎಳ್ಳು ಬೆಳೆ ತೆಗೆದುಕೊಂಡಿದ್ದಾರೆ, ಬಾವಿಗಳನ್ನು ಕೂಡ ಹಾಳು ಮಾಡಿದ್ದಾರೆ. ದಯವಿಟ್ಟು ಅವರಿಗೆ ಪೂರ್ತಿ ಪರಿಹಾರ ಕೊಡಬೇಕು, ಮತ್ತು ಅವರಿಗೆ ಆ ಜಮೀನನ್ನು ಖಾಯಂ ಮಾಡಿಕೊಡಬೇಕು. ತಹಶೀಲ್ದಾರ್ ಹೇಳಿದ್ದು ವೇದ ವಾಕ್ಯ ಅಲ್ಲ, ಅವನೇನು ಸರ್ವಜ್ಞನಲ್ಲ ಸರ್ಕಾರಕ್ಕೆ ಅಧಿಕಾರ ಇದೆ. ಮಾನವೀಯತೆಯ ದೃಷ್ಟಿಯಿಂದ ಆ ಜಮೀನನ್ನು ಅವರಿಗೆ ಪಂಜೂರ್ಮಾಡಿ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಪಂಪಾಪತಿ.— ಈ ವಿಷಯವನ್ನು ಮೂರು ವಾರಗಳ ಹಿಂದೆಯೇ ಎತ್ತಿದ್ದೆವು. ಸಚಿವರು ವಿಚಾರ ಮಾಡಿ ತಿಳಿಸುತ್ತೇವೆಂದರು. ಈಗ ವಿಚಾರ ಮಾಡಿದ್ದಾರೆ. ಆದರೆ ಅವರಿಗೆ ಬುದ್ಧಿರತಕ್ಕ ಪರದಿ ಏನಿದೆ ಅದು ಸ್ವಲ್ಪಕ್ಕೆ ದೂರವಾದ ವರದಿ. ಸಚಿವರು ಅನೇಕ ಸಾರಿ ಇದೇ ಸದನದಲ್ಲಿ ಹೇಳಿದ್ದಾರೆ, ೧೯೮೪ ಕ್ಕೆ ಹಿಂದೆ ಯಾರು ಬಗರ್ ಹುಕುಂ ಮಾಡಿರುತ್ತಾರೆ ಅವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಇದೇ ಸಚಿವರು ಹೇಳಿದ್ದಾರೆ. ೧೯೮೪ ರಲ್ಲಿ ಈ ಜನರು ಹೋಗಿದ್ದಾರೆ. ಪರ ವಿರೋಧ ಎಂಬುದಕ್ಕೆ ನ್ಯಾಯಾಲಯ ಇದೆ. ಆದರೆ ಇವರು ಯಾರು ಆ ಗಿಡಗಳನ್ನು ಕಡಿಯುವುದಕ್ಕೆ ? ಜನತಾ ಪಕ್ಷದ ಪ್ರಮುಖರಾದ ಚಿಕ್ಕಣ್ಣ ಎಂಬುವವರು ಗುಂಪುಕಟ್ಟಿಕೊಂಡು ಹೋಗಿದ್ದಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅವರನ್ನು ಜೈಲಿಗೆ ಹಾಕಿದ್ದೀರಾ ? ಗೋಮಾಳ ಜಾಸ್ತಿ ಬೇಕಾಗಿತ್ತು ಎಂದು ಇವರು ಹೋಗಿ ತೆಂಗಿನ ಮರಗಳನ್ನು ಕಡಿದರು. ನೀವು ಹೇಳಿ ಕಡಿಸಿದ್ದೀರಾತಿಳಿ ನಾನ್ನು ಆ ರೀತಿ ತಿಳಿದುಕೊಳ್ಳಬೇಕಾಗುತ್ತದೆ. ಗೋಮಾಳ ಇಲ್ಲ, ಆದಕ್ಕೆ ತೆಂಗಿನ ಮರಗಳನ್ನು ಕಡಿಯಿರಿ ಎಂದು ಹೇಳಿದ್ದಿರಾ ? ಈ ದಿಸೆಯಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳಬೇಕೋ ಅದಕ್ಕೆ ಪ್ರಯತ್ನ ಮಾಡಬೇಕಾಗಿತ್ತು ಜನರಿಗೆ ಬೇರೆ ಜಮೀನು ಒದಗಿಸುತ್ತೇವೆಂದು ಹೇಳಬೇಕಾಗಿತ್ತು. ಯಾವುದೂ ಹೇಳಲಿಲ್ಲ, ಅವರು ಹೋಗಿ ಕೂಡ ನೋಡಲಿಲ್ಲ. ತೆಂಗಿನ ಮರ ಕಡಿದರು, ಪಪ್ಪಾಯಿ ಗಿಡ ಕಡಿದರು, ಎಳ್ಳಿದ್ದ ನಾಯಿಯನ್ನು ಕಡಿದರು, ಹೆಣ್ಣು ಮಕ್ಕಳು ಬಂದರೆ ಅವರ ತಾಳಿ ಹರಿದರು. ಈ ಪ್ರಕಾರ ಆ ಜನರಿಗೆ ತೊಂದರೆ ಕೊಟ್ಟರು. ಇಲ್ಲಿಯವರೆಗೆ ತಹಶೀಲ್ದಾರರು ಸ್ಥಳಕ್ಕೆ ಹೋಗಲಿಲ್ಲ. ಜಿಲ್ಲಾಧಿಕಾರಿಗಳು ಹೋದರು, ಪೋಲೀಸ್ ಅಧಿಕಾರಿಗಳು ಹೋದರು. ಅವರಿಗೆ ಮರಗಳನ್ನು ಕಡಿಯುತಕ್ಕ ಸಂದರ್ಭದಲ್ಲಿ ಅದನ್ನು ತಡೆಯಬೇಕಾಗಿತ್ತು ಆಗಲಿಲ್ಲ. ಅಧಿಕಾರಿಗಳು ಹೋದ ಮೇಲೆ ಯಾರೂ ಮರಗಳನ್ನು ಕಡಿಯಬೇಡಿ, ಕಡಿದರೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಬೇಕಾಗಿತ್ತು. ಆ ಅಧಿಕಾರಿಗಳಂ ಅದನ್ನು ಹೇಳಲಿಲ್ಲ ಆ ಅಧಿಕಾರಿಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಕಣಿದರು. ಅವರು ಕಾರಿನಲ್ಲಿ ಹೋದರು, ಬಂದರು, ಅವರನ್ನು ಇನ್ನೂ ಅಲ್ಲೇ ಇಟ್ಟಿದ್ದೀರಿ, ಅಂಥ ಅಧಿಕಾರಿಗಳು ಅಲ್ಲಿರುವುದಕ್ಕೆ ಲಾಯಕ್ಕಿಲ್ಲ ಕೂಡಲೇ ವರ್ಗ ಮಾಡಿ ಅಥವಾ ಬೇರೆ ಏನಾದರೂ ಮಾಡಿ. ತಹಶೀಲ್ದಾರ್ ನಿಮಗೆ ರಿಪೋರ್ಟ್ ಒದಗಿಸಬೇಕಾಗಿತ್ತು, ಸ್ಥಳಕ್ಕೆ ಹೋಗಬೇಕಾಗಿತ್ತು ಎಷ್ಟು ಗಿಡಗಳನ್ನು ಕಡಿದಿದ್ದಾರೆ ಎಷ್ಟು ಎಳ್ಳನ್ನು ಬಿತ್ತಿದ್ದರು ಎಷ್ಟು ಬಾವಿಗಳು ಹಾಳಾಗಿವೆ ಎಂಬುದನ್ನೆಲ್ಲ ಹೇಳಬೇಕಾಗಿತ್ತು. ಅದನ್ನು ಹೇಳಿದ್ದಾರೆಯೇ? ಇಲ್ಲ. ತಹಶೀಲ್ದಾರರದ್ದು ಒಂದು ಆಜ್ಞೆ ಎಸಿ. ಯವರದ್ದು ಒಂದು ಆಜ್ಞೆ ಡಿ ಸಿ. ಯವರದ್ದು ಒಂದು ಆಜ್ಞೆ. ಈ ರೀತಿ ಆಜ್ಞೆಗಳಾದರೆ ಏನು ಗತಿ ? ಈ ರೀತಿಯ ಆಜ್ಞೆಗಳನ್ನು ಬದಲಾಯಿಸಿ ಮಾನ್ಯ ಸಚಿವರು ೧೯೮೪ ರ ಹಿಂದೆ ಯಾರು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಅವರಿಗೆ ಅದನ್ನು ಖಾಯಂ ಮಾಡಿಕೊಡುತ್ತೇವೆಂದು ಹೇಳಿದ್ದರು. ಆದರೆ ಗೋಮಾಳವನ್ನು ಬಗರಹುಕುಂ ಮಾಡಿದ್ದಾರೆ ಬಿಡಿಸುತ್ತೇವೆಂದು ಏನಾದರೂ ಹೇಳಿದ್ದರೆ ? ಇಲ್ಲ.

ಆ ರೀತಿ ಏನೂ ಹೇಳಿಲ್ಲ. ಅವರು ರಿಜಿಸ್ಟರ್ ಮಾಡಿರುವ ಜಮೀನುಗಳನ್ನು ಸಾಗು ಮಾಡಿದ್ದಾರೆ. ಅದಕ್ಕೆ, ಪಿ. ಎಲ್. ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದಾರೆ.

೧-೩೦ ಪಿ. ಎಂ.

ಪಿ.ಡಬ್ಲ್ಯು.ಡಿ. ಯಿಂದ ಪರವಾನಗಿಗಳನ್ನು ಕಟ್ಟಿಸಿಕೊಂಡಿದ್ದಾರೆ. ಸರ್ಕಾರದಿಂದ ಅನೇಕ ಸೌಲಭ್ಯಗಳನ್ನು ಪಡೆದಿದ್ದಾರೆ. ಆ ಹಣ ಎಲ್ಲಾ ಹೋಯಿತಾ ? ಅವರು ಬ್ಯಾಂಕಿಗೆ ಸಾಲ ಯಾವರೀತಿ ಕಟ್ಟಬೇಕು ? ಬಗರ್‌ಹುಕುಂ ಸಾಗುವಳಿ ಮಾಡುವವರಿಗೆ ಕಾನೂನು ಪ್ರಕಾರ ಅವರು ಮಾಡಿದಿದ್ದರೆ ಕ್ರಮ ತೆಗೆದುಕೊಳ್ಳಿ, ಇಂತಿಷ್ಟು ಇರಬೇಕು ಎಂದು ಕಾಯಿದೆ ಮಾಡಿದ್ದೀರಿ. ಅದಕ್ಕಿಂತ ಹೆಚ್ಚಿದ್ದರೆ ಕ್ರಮ ತೆಗೆದುಕೊಳ್ಳಿ, ತಪ್ಪು ಮಾಡಿದರೆ ಕ್ರಮ ತೆಗೆದುಕೊಳ್ಳಿ ನಾವು ಬೇಡ ಎಂದು ಹೇಳುವುದಿಲ್ಲ. ಅವರು ಯಾರು ಎಂದು ನಾವು ನೋಡಿಲ್ಲ. ಬಡವರಿಗೆ, ಹಿಂದುಳಿದವರಿಗೆ ಅನ್ಯಾಯವಾಗಿದೆ, ಆದರಲ್ಲೂ ಸಾಗುವಳಿ ಮಾಡಿಕೊಂಡು ಜೀವನ ಮಾಡತಕ್ಕ ರೈತರಿಗೆ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸುತ್ತೀರಿ ಎಂದು ನಂಬಿದ್ದರೆ ಇಂಥ ವರದಿಯನ್ನು ಕೊಟ್ಟು...

ಶ್ರೀ ಬಿ. ಎನ್. ಬಚ್ಚೇಗೌಡ.—ಅಧ್ಯಕ್ಷರೆ, ಇದು ಕಾಲಿಂಗ್ ಅಟೆನ್‌ಷನ್. ಅವರು ಬೇಕಾದರೆ ಅರ್ಧ ಗಂಟೆ ಚರ್ಚೆ ಮಾಡಲಿ.

ಶ್ರೀ ಪಂಪಾಪತಿ.—ಎಲ್ಲದಕ್ಕೂ ಒಂದೇ ಮಂತ್ರ ಬೇಡ.

ಶ್ರೀ ಬಿ. ಲಕ್ಕಪ್ಪ.—ಇದು ಕಾಲಿಂಗ್ ಅಟೆನ್‌ಷನ್ ಎಂದು ನಮಗೆ ಗೊತ್ತಿದೆ.

ಅಧ್ಯಕ್ಷರು.—ಹೌದು. ಕಾಲಿಂಗ್ ಅಟೆನ್‌ಷನ್ ಅಂದರೆ ಭಾಷಣ ಮಾಡುವುದಾ ? ಏನ್ರಿ ಇದು ? ಕ್ಲಾರಿಫಿಕೇಷನ್ ಕೇಳಬೇಕು ನೀವು. ಆದು ಬಿಟ್ಟು ಚಿಕ್ಕ ಭಾಷಣ ಮಾಡಿದ್ದೀರಿ.

ಶ್ರೀ ಪಂಪಾಪತಿ.—ಅವರಿಗೆ ಪರಿಹಾರ ಕೊಡಬೇಕು. ಯಾವ ರೈತರಿಗೆ ಅನ್ಯಾಯ ಆಗಿದೆಯೋ ಅವರಿಗೆ ಪರಿಹಾರ ಕೊಡಬೇಕು ಮತ್ತು ಯಾರು ಈ ಅನ್ಯಾಯವನ್ನು ಮಾಡಿದ್ದಾರೋ ಅವರ ಮೇಲೆ ಕ್ರಮಕೈಗೊಳ್ಳಬೇಕು ಎಂಬ ಮಾತನ್ನು ಇವತ್ತು ಹೇಳುತ್ತಿದ್ದೇನೆ ದಯವಿಟ್ಟು ಅಧಿಕಾರಿಗಳ ವರದಿಯನ್ನು ನಂಬಿಕೊಂಡು ಬಡವರಿಗೆ ಅನ್ಯಾಯ ಮಾಡಬೇಡಿ. ಬಡವರಿಗೆ ಅನ್ಯಾಯವಾಗದಂತೆ ಪರಿಹಾರ ಕೊಡಿ. ಯಾರು ಅನ್ಯಾಯ ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಡುವುದಕ್ಕೆ ಆಜ್ಞೆ ಮಾಡಿ ಎಂದು ಆಗ್ರಹ ಪೂರ್ವಕವಾಗಿ ತಮ್ಮನ್ನು ಒತ್ತಾಯಿಸುತ್ತೇನೆ.

ಶ್ರೀಮಲ್ಲಿಕಾರ್ಜುನ ಎಂ.ಬಿರ್ದಿ.—ಈಗಾಗಲೇ ರಾಮದಾಸ್‌ಅವರು ಹೇಳಿದ್ದಾರೆ ವೆಂಕಟರಾಮಯ್ಯನವರು ಮತ್ತು ಪಂಪಾಪತಿಯವರೂ ಹೇಳಿದ್ದಾರೆ. ಪ್ರಮುಖವಾದ ವಿಷಯ ಎಂದರೆ ಸರ್ವೆ ನಂ. ೪೫ ಮತ್ತು ೪೦ರಲ್ಲಿ ೫೧ ಜನರಿಗೆ ಮತ್ತು ೭೫ ಜನರಿಗೆ ಜಮೀನು ಅಲಾಟ್ ಆಗಿದೆ ಎಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಸರ್ಕಾರಿ ರೂಲ್ಸ್ ಪ್ರಕಾರ ರೆಗ್ಯುಲರೈಸ್ ಮಾಡಿದ್ದಾರೆ. ಆನಂತರ ಎವಿಕ್ಷನ್ ಮಾಡಬೇಕಾದರೆ ಪದ್ಧತಿ ಇದೆ. ನೋಟೀಸ್ ಕೊಟ್ಟು ಎವಿಕ್ಷನ್ ಮಾಡಿ ಪೊಸಿಷನ್ ತೆಗೆದುಕೊಂಡು ಪುನಃ ಹೋಗಿದ್ದರೆ ಐ.ಪಿ.ಸಿ. ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಅದನ್ನು ಬಿಟ್ಟು ಚಿಕ್ಕಣ್ಣ ಎಂಬುವವರು ಗುಂಪು ಕಟ್ಟಿಕೊಂಡು ನೂರಾರು ಜನರನ್ನು ಕರೆದುಕೊಂಡು ಹೋಗಿ ಇದ್ದಂಥ ತೆಂಗಿನ ಗಿಡಗಳನ್ನು ಕಟ್ ಮಾಡಿಕೊಂಡರು ಕಾಯಿಪಲ್ಲೆಯನ್ನು ಹಾಳು ಮಾಡಿ ಬರುವಂಥ ಅವಶ್ಯಕತೆ ಏನಿತ್ತು? ಕಾನೂನನ್ನು ಅವರ ಕೈಗೆ ಏತಕ್ಕೆ ತೆಗೆದುಕೊಂಡರು ? ಅವರ ಮೇಲೆ ಯಾವ ಕ್ರಮವನ್ನು ಪೋಲೀಸರು ಮತ್ತು ತಹಸೀಲ್ದಾರರು ಏತಕ್ಕೆ ತೆಗೆದುಕೊಂಡಿಲ್ಲ ? ಮಾನವೀಯತೆ ದೃಷ್ಟಿಯಿಂದಲೂ ಒಂದು ಸಾರಿ ರೆಗ್ಯುಲರೈಸ್ ಮಾಡಿದಮೇಲೆ ಬಿಡಬೇಕಾಗುತ್ತದೆ. ಆ ಜನರಿಗೂ ಇವರಿಗೂ ಆಗುವುದಿಲ್ಲ ಎಂದು ಕ್ಯಾನ್ಸಲ್ ಮಾಡಿದ್ದೇವೆ ಎಂದು ಹೇಳಿ ಕೆಲವು ಗೊಂಡಾಗಳು ಹಾಳು ಮಾಡಿದರೆ ನಿಜವಾಗಿಯೂ ಆದಕ್ಕೆ ಪೋಲೀಸರು ಮತ್ತು ತಹಶೀಲ್ದಾರರ ಕುಮ್ಮಕ್ಕಿದೆ ಎಂದು ಹೇಳಬೇಕಾಗುತ್ತದೆ ದಯವಿಟ್ಟು ಅವರ ಜಮೀನನ್ನು ಅವರಿಗೆ ವಾಪಸ್ ಕೊಡಿಸಿ ಈಗಾಗಲೇ ತೆಂಗಿನಗಿಡ ಮತ್ತು ಕಾಯಿಪಲ್ಲೆಯನ್ನು ಏನು ಹಾಳು ಮಾಡಿದ್ದಾರೆ ಅದಕ್ಕೆ ಕಾಂಪೆನ್‌ಸೇಷನ್ ಕೊಡತಕ್ಕ ವ್ಯವಸ್ಥೆ ಮಾಡಿ. ಮೂರನೆಯದಾಗಿ ಪಿ.ಎಲ್.ಡಿ. ಬ್ಯಾಂಕಿನಿಂದ ಅವರು ಸಾಲ ತೆಗೆದುಕೊಂಡಿದ್ದಾರೆ. ಸಾಯಿಲ್ ಕನ್ಸರ್ವೇಷನ್‌ನವರು ಕೆಲಸ ಮಾಡಿದ್ದಾರೆ, ನಾಷನಲೈಸ್ ಬ್ಯಾಂಕಿನಿಂದ ಕೆಲವರು ಸಾಲ ತೆಗೆದುಕೊಂಡಿದ್ದಾರೆ. ಇಷ್ಟಿದ್ದರೂ ತಹಸೀಲ್ದಾರ್ ಅವರು ಕ್ಯಾನ್ಸಲ್ ಮಾಡಿ ದಾಳಿ ಮಾಡಿ ಬೆಳೆಯೆಲ್ಲಾ ಕಡಿದು ಹಾಕಿ ಎಂದರೆ

ತಹಸೀಲ್ದಾರನನ್ನು ಸಸ್ಪೆಂಡ್ ಆಲ್ಲ ಡಿಸ್‌ಮಿಸ್ ಮಾಡಬೇಕು. ೧೫೦ ಕುಟುಂಬಕ್ಕೆ ತೊಂದರೆ ಕೊಡತಕ್ಕ ಮನುಷ್ಯನಿಗೆ, ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತೆ ಮಾಡತಕ್ಕವನಿಗೆ ಮೊದಲು ತೆಗೆದುಹಾಕಬೇಕು. ಅವನಿಗೆ ಎಲ್ಲೂ ಎಗ್ಸಿಕ್ಯುಟೀವ್ ಪೋಸ್ಟ್ ಕೊಡುವುದಲ್ಲ, ಡಿಸ್‌ಮಿಸ್ ಮಾಡಿ ವ ನೆಗೆ ಕಳುಹಿಸಬೇಕು. ದಯವಿಟ್ಟು ಆ ಆಡವರಿಗೆ ಜಮೀನು ಕನ್ಫರ್ಮ್ ಮಾಡಿ ಕಾಂಪೆನ್‌ಸೇಷನ್ ಕೊಡಿಸಿ. ರೆಕಾರ್ಡ್ಸ್ ಪ್ರಕಾರ ಪಿ.ಎಲ್.ಡಿ ಬ್ಯಾಂಕಿನವರು ನ್ಯಾಷನಲೈಸ್ ಬ್ಯಾಂಕಿನವರು ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಹಣ ಖರ್ಚು ಮಾಡಿ ಕೆಲಸ ಮಾಡಿದ್ದಾರೆ. ಗೂಂಡಾಗಳನ್ನು ಯಾರು ಬೆಳಿಗಳನ್ನು ಹಾಳು ಮಾಡಿದ್ದಾರೆ ಅವರ ಮೇಲೆ ಫೈನ್ ಹಾಕಬೇಕು. ಇಲ್ಲದಿದ್ದರೆ ಅವರನ್ನು ಗೂಂಡಾ ಆಕ್ಟ್ ಕೆಳಗೆ ಒಳಗೆ ಹಾಕಿ. ಈ ರೀತಿ ಒಂದು ಕಡೆ ಮಾಡಿದರೆ ಮತ್ತೊಂದು ಕಡೆ ಈ ರೀತಿ ಅನ್ಯಾಯ ಮಾಡುವುದ ಕ್ಕಾಗುವುದಿಲ್ಲ. ಆ ಬಗ್ಗೆ ತಾವು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಿ. ಅದನ್ನು ಬಿಟ್ಟು ಕೇವಲ ವರದಿಯನ್ನು ಕೊಟ್ಟಿದ್ದೇನೆ. ಅದರ ಆಧಾರದಮೇಲೆ ಸ್ಟಿಕಾನ್ ಆಗಬೇಕೆಂದು ಕೂರಬಾರದೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊಲನೆಯದಾಗಿ ಈ ಮೂರು ಗ್ರಾಮ ಅಂದರೆ ಕುಂದೂರಿನ ಆಜುಬಾಜುವಿನ ಗ್ರಾಮಗಳಲ್ಲಿ ಇರತಕ್ಕವರಲ್ಲರೂ ಹಿಂದುಳಿದ ವರ್ಗಕ್ಕೆ ಸೇರಿದವರು ಮುಂದುವರಿದವರು ಯಾರೂ ಇಲ್ಲ. ಗೌಲ್ಲರ ಹಟ್ಟಿಯಲ್ಲಿ ಸಾಮಾನ್ಯವಾಗಿ ಹೆಚ್ಚು ದನಕರುಗಳನ್ನು ಇಟ್ಟುಕೊಂಡವರೇ ಇರುತ್ತಾರೆ. ಅವರು ಆದರಿಂದಲೇ ಜೀವನ ಮಾಡಬೇಕು ಅಲ್ಲಿರತಕ್ಕವರೆಲ್ಲರೂ ಹಿಂದುಳಿದ ವರ್ಗದವರೇ ಇದ್ದಾರೆ. ಮುಂದುವರಿದ ಜನಾಂಗದವರ್ಯಾರೂ ಇಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅವರು ೧೯೮೮ರ ತನಕ ಈ ರೀತಿಯಾಗುವುದಕ್ಕೆ ಕಾಯಬೇಕಾಗಿತ್ತಾ? ೧೯೮೧ರಲ್ಲಿ ಅವರಿಗೆ ಗ್ರಾಂಟ್ ಆಗಿದೆ. ನಿಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲಿ ಅಂತ ಆ ಜನ ಇವರಿಗೆ ತೊಂದರೆ ಕೊಡುವುದಕ್ಕೆ ಕಾಯುತ್ತಿದ್ದರಾ,

ಶ್ರೀ ಎಸ್.ಆರ್. ಬೊಮ್ಮಾಯಿ.—೧೯೬೩ರಲ್ಲೇ ಆ ಜನರಿಗೆ ಆ ಜಮೀನು ಗ್ರಾಂಟ್ ಆಯಿತು. ಆದರೆ ೧೯೬೫ರಲ್ಲಿ ಡಿ.ಸಿ. ಅದನ್ನು ಕ್ಯಾನ್ಸಲ್ ಮಾಡಿದ್ದಾರೆ, ಇದರ ಇತಿಹಾಸ ನೋಡಬೇಕು. ಅಲ್ಲಿರತಕ್ಕ ಮೂರು ಗ್ರಾಮಗಳ ನಡುವೆ ಇರತಕ್ಕ ಭಿನ್ನಾಭಿಪ್ರಾಯಗಳು ಜಗಳವಾಗಿ, ಅದು ಮುಂದು ವರಿಯುತ್ತಿದೆ. ೬೫ರಲ್ಲಿ ಗ್ರಾಂಟ್ ಆದದ್ದನ್ನು ಡಿ.ಸಿ. ೬೫ರಲ್ಲಿ ಕ್ಯಾನ್ಸಲ್ ಮಾಡಿದರು. ಆಮೇಲೆ ೧೯೮೧ರಲ್ಲಿ ಪುನಃ ರೀಗ್ರಾಂಟ್ ಮಾಡಿದಾಗ ಇಲ್ಲೀಗಲ್ಲಾಗಿ ಗ್ರಾಂಟ್ ಮಾಡಿದ್ದಾರೆ. ಯಾವುದಾದರೂ ಬಗರ್‌ಹುಕ್ಕುಂ ಸಾಗುವಳಿ ಮಾಡುತ್ತಿದ್ದರೆ, ಅಂತಹವರಿಗೆ ಸರ್ಕಾರದ ರೂಲ್ಸ್ ಪ್ರಕಾರವೇ ಗ್ರಾಂಟ್ ಮಾಡಬಹುದು. ಇದು ಆ ರೀತಿಯಾದುದಲ್ಲ. ೧೯೬೩ರಲ್ಲಿ ಗ್ರಾಂಟ್ ಆದುದರಿಂದ ೬೫ರಲ್ಲಿ ಡಿ.ಸಿ. ಕ್ಯಾನ್ಸಲ್ ಮಾಡಿದ್ದಾರೆ. ಅದೇ ರೀತಿ ಇಲ್ಲಿಗಲ್ಲಾಗಿ ೧೯೮೧ರಲ್ಲಿ ಗ್ರಾಂಟ್ ಆದದ್ದನ್ನು ಸ್ಪೆಷಲ್ ಡಿ.ಸಿ. ಯವರು ೧೯೮೫ರಲ್ಲಿ ಕ್ಯಾನ್ಸಲ್ ಮಾಡಿದ್ದಾರೆ. ಆ ಆರ್ಡರ್‌ನಲ್ಲಿ ಎಲ್ಲವೂ ಇದೆ ಮೊದಲನೆಯದು ಅದು ಗೋಮಾಳವಾಗಿದೆ. ಆ ರೀತಿಯ ಗೋಮಾಳವನ್ನು ಸರ್ಕಾರದ ಪರವಾನಗಿ ಇಲ್ಲದೆ ಸಾಗುವಳಿ ಮಾಡುವುದಕ್ಕೆ ಬರುವುದಿಲ್ಲ. ಪರ್ಮಿಷನ್ ಬೇಕಾಗುತ್ತದೆ. ತಹಸೀಲ್ದಾರ್ ಅವರು ಗ್ರಾಂಟ್ ಮಾಡು ವಾಗ ಅವಸರದಲ್ಲಿ ಗ್ರಾಂಟ್ ಮಾಡಿರಬಹುದು. ಆದರೂ ಅವರು ಕಾನೂನು ಬಿಟ್ಟು ಗ್ರಾಂಟ್ ಮಾಡಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ಗ್ರಾಂಟ್ ಮಾಡುವಾಗ ಡಿ.ಸಿ.ಯವರ ಪರ್ಮಿಷನ್ ತೆಗೆದುಕೊಂಡಿಲ್ಲ. ಅಥವಾ ಸರ್ಕಾರದ ಪರ್ಮಿಷನ್ ಅನ್ನೂ ತೆಗೆದುಕೊಂಡಿಲ್ಲ. ಮತ್ತೆ ಯಾರ್ಯಾರಿಗೆ ಗ್ರಾಂಟ್ ಮಾಡಿದ್ದಾರೆ ಅದರಲ್ಲಿ ಬಡವರೂ ಇದ್ದಾರೆ. ಸರ್ಕಾರಿ ನೌಕರದಾರರ ಸಂಬಂಧಿಕರೂ ಹೆಚ್ಚು ಇದ್ದಾರೆ. ಯಾವ ರೀತಿ ಸರ್ಕಾರದ ಜಮೀನನ್ನು ಕಬಳಿಸುತ್ತಿದ್ದಾರೆ ಎಂಬುದನ್ನು ತಾವು ನೋಡಬೇಕು. ಬಡವರ ಬಗ್ಗೆ ಸಿಂಪತಿ ಇರಬೇಕು. ಅದೇ ರೀತಿ ಭೂಹೀನರ ಬಗ್ಗೆಯೂ ಸಿಂಪತಿ ಇರಬೇಕು. ಅವರಿಗೆ ಭೂಮಿಯನ್ನು ಕೊಡೋಣ. ಆದರೆ ಇಲ್ಲಿ ನಡೆದಂತಹ ಪ್ರಕರಣದಲ್ಲಿ ನೋಡುವುದಾದರೆ:

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ಆದರೆ ಯಾವ ಕಾನೂನಿನಲ್ಲಿದೆ ಗೂಂಡಾಗಳನ್ನು ಕಳುಹಿಸಿ ಆ ಜಮೀನಿನಲ್ಲಿರತಕ್ಕ ಗಿಡಗಳನ್ನು ಕಡಿ ಅಂತ?

ಶ್ರೀ ಜಿ. ರಾಮದಾಸ್ —ಹೆಚ್ಚು ಜಮೀನು ಇದ್ದವರು ಇದ್ದರೆ ಅಂತಹವರಿಗೆ ಮಂಜೂರು ಮಾಡಿರುವ ಜಮೀನನ್ನು ವಜಾ ಮಾಡಿ. ನಾವು ಬೇಡ ಅಂತ ಹೇಳುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಖಿರ್ಗೆಯವರು ಹೇಳಿದ್ದು ಸರಿ. ಕಾನೂನಿನ ವಿರುದ್ಧವಾಗಿ ವರ್ತಿಸಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅವರಿಗೆ ಕಾನೂನು ರೀತ್ಯ ಮಂಜೂರಾಗಿದ್ದರೆ, ಕಾನೂನು ಪ್ರಕಾರ ಮೊದಲು ಅವರಿಗೆ ನೋಟೀಸ್ ಕೊಡಬೇಕು ಅನಂತರ ಅಲ್ಲಿಂದ ಎವಿಕ್ಟ್ ಮಾಡಬೇಕು. ಆದರೆ ಇಲ್ಲಿ ಕೆಲವರು ಕಾನೂನನ್ನು ತಮ್ಮ ಕೈಯ್ಯಲ್ಲಿ ತೆಗೆದುಕೊಂಡು ಏನು ಕೃತ್ಯ ಮಾಡಿದ್ದಾರೆ, ಅಂತಹವರ ಮೇಲೆ ಕ್ರಿಮಿನಲ್ ಆಕ್ಷನ್ ತೆಗೆದು ಕೊಂಡಿದ್ದೇವೆ. ಅವರು ಅಪೀಲ್ ಮಾಡಲಿ. ಆಗ ಅದು ಸರ್ಕಾರದ ಮುಂದೆ ಬರುತ್ತದೆ. ಆಗ ಯಾವ ರೀತಿ ಮಾಡಬೇಕೆಂಬುದನ್ನು ನೋಡೋಣ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಯಾರು ಈ ರೀತಿ ಮಾಡಿದ್ದಾರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ. ಅವರು ಯಾರೇ ಇರಲಿ ಅಂತಹವರ ಬಗ್ಗೆ ನಿಷ್ಪಾರಪಾತ ಕ್ರಮ ಕೈಗೊಳ್ಳಿ ಎಂದು ಆದೇಶ ನೀಡಿದ್ದೇನೆ. ಈ ವಿಚಾರದಲ್ಲಿ ತಹಸೀಲ್ದಾರರು ತಪ್ಪು ಮಾಡಿದ್ದಾರೆಂದು ನನಗೆ ಗೊತ್ತಾಗಿ ಬಂದದ್ದರಿಂದ ಈಗಾಗಲೇ ಅವರನ್ನು ಸಸ್‌ಪೆಂಡ್ ಮಾಡಿದ್ದೇನೆ. ತಹಸೀಲ್ದಾರ್ ಮೇಲೆ ಆಕ್ಷನ್ ತೆಗೆದುಕೊಂಡಿದ್ದೇನೆ. ಯಾತ್ಯಾರು ಇದರಲ್ಲಿ ಇನ್‌ವಾಲ್ ಆಗಿದ್ದಾರೆ ಅವರು ಯಾವ ಪಕ್ಷದವರೇ ಇರಲಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪೋಲೀಸ್‌ನವರಿಗೂ ಕೂಡ ಹೇಳಿದ್ದೇನೆ. ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಪರಿಹಾರದ ಪ್ರಶ್ನೆ ಬರುತ್ತದೆ. ಆ ರೀತಿಯ ಪರಿಹಾರವನ್ನು ಕೊಡಬೇಕೆಂಬ ಪ್ರಶ್ನೆ ಬಂದಾಗ ಲೀಗಲಿ ಅವರು ಪೊಜಿಷನ್‌ನಲ್ಲಿ ಇರಬೇಕು. ಟಿಪ್ಪರಲ್ಲಿ ಗ್ರ್ಯಾಂಟ್ ಮಾಡಿದ್ದನ್ನು ಟಿಪ್ಪರಲ್ಲಿ ಡಿ.ಸಿ. ಕ್ಯಾನ್ಸಲ್ ಮಾಡಿದ್ದಾರೆ ಕ್ಯಾನ್ಸಲ್ ಆದ ಮೇಲೂ ಅವರು ಕಬ್ಜಾದಲ್ಲಿ ಮುಂದುವರಿಯುತ್ತಿದ್ದರೆ ಅದು ಕಾನೂನು ಬಾಹಿರವಾದುದು. ಇದೊಂದು ರೀತಿಯಲ್ಲಿ ಟ್ರೆನ್ ಪಾಸ್.

ಸಿವಿಲ್ ಕೋರ್ಟ್‌ನಲ್ಲಿ ಒಂದು ಆರ್ಡರ್ ಆಗಿದೆ. ಈ ಜನ ಈ ಭೂಮಿಯಲ್ಲಿ ಎಂಟರ್ ಆಗಬಾರದು ಎಂದು ಆಗಿದೆ. ಗೊಲ್ಲರಹಟ್ಟಿ ಜನರು ಕೋರ್ಟ್‌ಗೆ ಹೋಗಿದ್ದಾರೆ. ಸಿವಿಲ್ ಕೋರ್ಟ್‌ನಲ್ಲಿ ಟೆಂಪರರಿ ಇಂಜೆಂಕ್ಷನ್ ಕೂಡಾ ಕೊಟ್ಟಿದ್ದಾರೆ. ಅದರ ಸಂಖ್ಯೆ ಒಎಸ್ ೧೬೨ ೮೮. ೧೯೮೮ರಲ್ಲಿ ಅವರು ಕೋರ್ಟ್‌ಗೆ ಹೋಗಿದ್ದಾರೆ ಅವರು ಯಾರೂ ಅಲ್ಲಿಗೆ ಹೋಗಬಾರದು ಎಂದು ಕೋರ್ಟ್ ಇಂಜೆಂಕ್ಷನ್ ಆರ್ಡರ್ ಕೊಟ್ಟಿದೆ. ಈ ಗ್ರಾಮಸ್ಥರ ನಡುವೆ ಬಹಳ ತುರುಸಿನ ತಿಕ್ಕಾಟ ಇದೆ. ಕಾನೂನು ಪ್ರಕಾರ ಕ್ರಮ ಕೈಗೊಂಡು ಅಲ್ಲಿ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೇನೆ. ಇನ್ನು ಪರಿಹಾರ ಕೊಡುವುದಕ್ಕೆ ಕಾನೂನು ಪ್ರಕಾರ ಸಾಧ್ಯವಿಲ್ಲ. ಟ್ರೆಸ್ ಪಾಸ್ ಲ್ಯಾಂಡ್‌ನಲ್ಲಿ ಏನು ಬೆಳೆದರೂ ಸರ್ಕಾರದ ನಿಯಮಾವಳಿ ಪ್ರಕಾರ ಅಲ್ಲಿ ಆಗಿರುವ ನಷ್ಟದ ಬಗ್ಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಅಲ್ಲಿ ಲೀಗಲ್ ಪೊಸಿಷನ್ ಇದ್ದು, ಸರ್ಕಾರಿ ಆಜ್ಞೆ ಈ ರೀತಿ ಹೇಳದೇ ಹೋಗಿದ್ದರೆ ಇದನ್ನು ಪರಿಶೀಲನೆ ಮಾಡಬಹುದಿತ್ತು. ಈಗ ಇದನ್ನು ಪರಿಶೀಲನೆ ಮಾಡುವುದೂ ಕಷ್ಟ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖಿರ್ಗೆ.—ಅಧ್ಯಕ್ಷರೇ, ಈ ಜಾಗ ೧೯೮೦ರಲ್ಲಿ ರೀಗ್ರ್ಯಾಂಟ್ ಆಗಿದೆ, ೧೯೮೮ರಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. ಬಂದು ಗುಂಪಿನವರು ತೆಗೆದುಕೊಂಡಿದ್ದಾರೆ ಇನ್ನೊಂದು ಗುಂಪಿನವರು ತೆಗೆದುಕೊಂಡಿಲ್ಲ. ಅಲ್ಲಿ ಜನ ಪಿಎಲ್‌ಡಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ವ್ಯವಸಾಯ ಮಾಡಿದ್ದಾರೆ ಅಲ್ಲಿ ಕೆಲವರು ಲ್ಯಾಂಡ್ ರೆವಿನ್ಯೂ ಕೊಟ್ಟಿರುವವರೂ ಇದ್ದಾರೆ. ಲೀಗಲ್ಲಾಗಿ ಅಲ್ಲದಿದ್ದರೂ ಪೆನಾಲ್ಟಿ ಮೂಲಕ ಕೊಟ್ಟಿರುತ್ತಾರೆ. ಮತ್ತೆ ಸಾಯಿಲ್ ಕನ್‌ಸರ್ವೇಷನ್ ಅವರಲ್ಲಿ ರೆಕಾರ್ಡ್ ಇರುತ್ತದೆ. ಇವತ್ತು ಯಾವ ಸರ್ವೇ ನಂಬರ್ ಮೇಲೆ ರಾಷ್ಟ್ರೀಕೃತ ಬ್ಯಾಂಕಿನವರು ಸಾಲ ಕೊಟ್ಟಿರುತ್ತಾರೆ ಎಂಬ ಬಗ್ಗೆ ವಿವರ ಸಿಗುತ್ತದೆ. ಇವತ್ತು ಯಾರ ಹತ್ತಿರ ಜಿನುಯಿನ್ ರೆಕಾರ್ಡ್ಸ್ ಇರುತ್ತದೋ ಅವರಿಗೆ ಪರಿಹಾರ ಕೊಡಿ. ಕಾಫೀ ಪ್ಲಾಂಟರ್ಸ್ ರೀತಿ ಇವರದ್ದು ನೂರಾರು ಎಕರೆ ಇಲ್ಲ. ಒಬ್ಬೊಬ್ಬರದು ೧ ಎಕರೆ ೨೦ ಗುಂಟೆ; ೧ ಎಕರೆ ೧೦ ಗುಂಟೆ ಜಮೀನು ಇದೆ. ೧೫೦ ಕುಟುಂಬಗಳು ಇದನ್ನು ಸಾಗು ಮಾಡುತ್ತಿದ್ದಾರೆ. ಹರಿಜನ ಫಾಲಿಫೈಬರ್ಸ್‌ಗೆ ಸರ್ಕಾರದ್ದು ಸಾವಿರಾರು ಎಕರೆ ಜಮೀನು ನಾವು ಇದ್ದಾಗಲೂ ಕೊಟ್ಟಿದ್ದೇವೆ; ನೀವು ಬಂದ ಮೇಲೂ ಕೊಟ್ಟಿದ್ದೀರಿ. ಇವತ್ತು ಈ ಬಡವರು ಒಂದೊಂದು ಎಕರೆಯಲ್ಲಿ ಕಾಯಿ ಪಲ್ಯೆ ಬೆಳೆಯುತ್ತಿದ್ದಾರೆ. ಕೆಲವರು ತೆಂಗಿನ ಗಿಡಗಳನ್ನು ಹಾಕಿದ್ದಾರೆ. ಅಲ್ಲಿಗೆ ಇನ್ನೊಂದು ಸಲ ಡೆಪ್ಯುಟಿ ಕಮಿಷನರ್‌ರವರನ್ನು ಕಳುಹಿಸಿ ಸ್ಪಾಟ್ ಎನ್‌ಕ್ವೈರಿ ಮಾಡಿ ಯಾರು ಯಾರು ಕಬ್ಜ ಇರುವವರು ಇದ್ದಾರೋ ಅವರಿಗೆ ಪರಿಹಾರವನ್ನು ಕೊಡಿ. ಹಳ್ಳಿಗಳಲ್ಲಿ ವೈಮನಸ್ಸು ಇದು ಇವರಿಗೆ ನಷ ಮಾಡಲೇಬೇಕೆಂದು ಪಟ್ಟು ಹಿಡಿದು ಇಂತಹ ಕೆಲಸ ಮಾಡುವವರು

ಇದ್ದೇ ಇರುತ್ತಾರೆ ಇಂತಹದ್ದಕ್ಕೆಲ್ಲಾ ಪರಿಹಾರವನ್ನು ಕೊಡದೇ ಇದ್ದರೆ ಬಹಳ ತಾಪತ್ರಯವಾಗಿಬಿಡುತ್ತದೆ. ಇಷ್ಟರೆಲ್ಲಾ ಹೆಚ್ಚು ಕಡಿಮೆ ಬಡವರೇ ಇದ್ದಾರೆ. ನಾಳೆ ನಾವು ಅಧಿಕಾರಕ್ಕೆ ಬಂದರೆ ಅವರು ನಮ್ಮ ಕಡೆ ಬರುತ್ತಾರೆ. ಈ ಪಾರ್ಟಿ ಎಂಬುದು ನಮಗೆ, ನಿಮಗೆ ಹಾಗೂ ಕೆಲವು ಅನುಕೂಲಸ್ಥರಿಗೆ. ಈ ಬಡವರ ಬಗ್ಗೆ ಕಳಕಳಿ ಇಟ್ಟು ಪರಿಹಾರ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಬಡವರ ಮೇಲೆ ೧೦೭ ಕೇಸ್ ಬುಕ್ ಮಾಡಿದ್ದಾರೆಂದು ತಿಳಿದು ಬಂದಿದೆ. ಇವತ್ತು ಜಮೀನು ಕಳೆದುಕೊಂಡಿರುವುದು ಅಲ್ಲದೇ ಇದಕ್ಕೂ ಅಲೆಯಬೇಕಾದ ಪರಿಸ್ಥಿತಿ ಬಂದು ನಾಳೆ ದಿವಸ ಇದರಿಂದ ಬೇಸತ್ತು ಎಲ್ಲರೂ ಇಂತಹ ಜಮೀನು ಬೇಡ, ಇನ್ನು ಮೇಲೆ ಇಂತಹ ಸರ್ಕಾರಿ ಸೌಕರ್ಯಗಳೇ ಬೇಡ ಎನ್ನುವ ಪರಿಸ್ಥಿತಿ ಅವರಲ್ಲಿ ಬರುತ್ತದೆ. ಆದ್ದರಿಂದ ಅವರ ಮೇಲೆ ಏನು ಕೇಸ್ ಹಾಕಿದ್ದೀರಿ ಅದನ್ನು ಸಹಾ ವಿತ್‌ಡ್ರಾ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟಸ್ವಾಮಯ್ಯ.—ತಾವೇ ಒಪ್ಪಿಕೊಂಡಿದ್ದೀರಿ. ಅವರು ಕಾನೂನುಬದ್ಧವಾಗಿ ಭೂಮಿಯ ಮೇಲಿದ್ದಾರೆ. ಆದ್ದರಿಂದ ಕಾನೂನು ಪ್ರಕಾರ ಅವರನ್ನು ಹೊರಗೆ ಹಾಕಬೇಕಾಗುತ್ತದೆ. ಅವರಿಗೆ ಪರಿಹಾರ ಕೊಡಬಹುದು. ೧೯೫೧ನೇ ಇಸವಿಯಿಂದ ಅವರು ಇವ್ವಾರೆ, ೧೯೮೧ನೇ ಇಸವಿಯಲ್ಲಿ ಗ್ರ್ಯಾಂಟ್ ಮಾಡಿದ್ದೀರಿ. ಎಂಟು ವರ್ಷಗಳ ಕಾಲ ಅವರನ್ನು ಬಿಟ್ಟಿದ್ದೀರಿ. ೫೦೦ ತೆಂಗಿನ ಗಿಡಗಳನ್ನು ಬೆಳೆಸಿಕೊಂಡಿದ್ದಾರೆ. ಬಾವಿ ಇದೆ. ಭೂಮಿನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ. ೧೯೬೫ನೇ ಇಸವಿಯಿಂದ ಕೆಲವರು ಅನುಭವದಲ್ಲಿದ್ದಾರೆ. ಕಾಫಿ ಪ್ಲಾಂಟರುಗಳ ತರಹ ೩೨ ಸಾವಿರ ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿಲ್ಲ. ಅಲ್ಲಿರುವವರಿಗೆ ನೀವು ಭೂಮಿಯನ್ನು ಕೊಡುವಾಗ ಇವರು ಬಡವರು ಇದ್ದಾರೆ ಕೊಟ್ಟಿದ್ದೀರಿ. ದಯವಿಟ್ಟು ಸರ್ಕಾರದಿಂದ ಪರಿಹಾರವನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿ.

ಶ್ರೀ ಪಂಪಾಪತಿ.—ಅಕ್ರಮ ಪ್ರವೇಶ ಮಾಡಿದವರನ್ನು ಹೊರಗೆ ಹಾಕುತ್ತೇವೆಂದರೆ ರಾಜ್ಯದಲ್ಲಿ ಲಕ್ಷಾಂತರ ಜನರನ್ನು ಹೊರಗೆ ಹಾಕಬೇಕಾಗುತ್ತದೆ. ನಾವು ಇದನ್ನೇ ಉಪಯೋಗಿಸಿಕೊಂಡು ಏನೇನೋ ಆಗುತ್ತದೆ, ದಯವಿಟ್ಟು ಆ ರೀತಿ ಆಗುವುದು ಬೇಡ. ಮೊದಲಿನಿಂದಲೂ ಕಷ್ಟ ಪಟ್ಟಿದ್ದಾರೆ. ನೀವು ಸಹಾಯ ಮಾಡಿದ್ದೀರಿ. ಹೆಚ್ಚು ಜಮೀನು ಹೊಂದಿರುವವರು ಸರ್ಕಾರಿ ನೌಕರರು ಇದ್ದಲ್ಲಿದ್ದರೆ ಅಂತಹವರನ್ನು ಬಿಡಿಸಬಹುದು. ಏನೂ ಇಲ್ಲದೆ ಇದನ್ನೇ ನಂಬಿಕೊಂಡಿರುವವರು ಇದ್ದರೆ ಅಂತಹವರನ್ನು ಬಿಡಿಸುವುದರಿಂದ ಅವರಿಗೆ ತೊಂದರೆಯಾಗುತ್ತದೆ. ಖಂಡಿತವಾಗಿಯೂ ಅವರನ್ನು ಇಲ್ಲಿಯೇ ಉಳಿಸಬೇಕು, ಅವರಿಗೆ ಪರಿಹಾರವನ್ನು ಕೊಟ್ಟು ಅವರನ್ನು ಅಲ್ಲಿಯೇ ಉಳಿಸಬೇಕು. ಅವರ ಮೇಲೆ ಏನಾದರೂ ಕೇಸುಗಳು ಇದ್ದರೆ ಕೂಡಲೇ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಜಿ. ರಾಮದಾಸ್.—ಸನ್ನ ಕ್ಷೇತ್ರದಲ್ಲಿರತಕ್ಕ ಅಧಿಕಾರಿಗಳನ್ನು ಮೊದಲು ಅಲ್ಲಿಂದ ಓಡಿಸಬೇಕು. ಪೋಲೀಸ್ ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳಿಂದ ತಪ್ಪುಗಳು ನಡೆಯುತ್ತಿವೆ. ಸರ್ವೆ ನಂಬರು ೯೬ರಲ್ಲಿ ಮೊನ್ನೆತಾನೆ ಇವರಂ ಸಪೋರ್ಟ್ ಮಾಡಿ ಎಳ್ಳು ಬಿತ್ತನೆ ಮಾಡಿದ್ದನ್ನು ಹಾಳು ಮಾಡಿದ್ದಾರೆ. ದ್ವೇಷವನ್ನು ಬೆಳೆಸುತ್ತಿದ್ದಾರೆ, ಅಲ್ಲಿರುವ ಅಧಿಕಾರಿಗಳನ್ನು ಮೊದಲು ಕಳುಹಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರಣೆ ಕೊಡುವುದು ಬೇಡವೆಂದು ಇದ್ದೆ, ಈಗ ಕೊಡಬೇಕಾಗುತ್ತದೆ. ಅತಿಕ್ರಮಣವೂ ಅಲ್ಲ, ರೆಗ್ಯುಲರೈಸೂ ಅಲ್ಲ ಅದು ಇಲ್ಲೀಗಲ್ ಗ್ರ್ಯಾಂಟ್ ಆಗಿರತಕ್ಕದ್ದು ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ಗೊಲ್ಲರಹಟ್ಟಿಯಲ್ಲಿ ಹೆಚ್ಚು ದನಕರುಗಳನ್ನು ಇಟ್ಟುಕೊಂಡಿದ್ದಾರೆ. ಅವರ ದನಕರುಗಳ ಮೇವಿಗಾಗಿ ಆ ಭೂಮಿ ಹಾಗೆಯೇ ಇರಬೇಕೆಂದು ಅವರು ಕೇಳುತ್ತಿದ್ದಾರೆ. ಆ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಕೊಟ್ಟರೆ ನಾವೆಲ್ಲಿ ಹೋಗಬೇಕೆಂದು ಕೇಳುತ್ತಿದ್ದಾರೆ. ಗೋಪಾಳದ ಅವಶ್ಯಕತೆ ಗೊಲ್ಲರಹಟ್ಟಿಗೆ ಇದೆ. ಅವರು ಬಡವರು ದನಕರುಗಳನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ. ಇಂತಹ ಸಮಸ್ಯೆಗಳು ಇರುವಾಗ ರೆಗ್ಯುಲರೈಸ್ ಆಗಿಲ್ಲ.

ಶ್ರೀ ಜಿ. ರಾಮದಾಸ್.—ಗೊಲ್ಲರು ೩೦ ಜನ ಸಾಗುವಳಿ ಮಾಡುತ್ತಿದ್ದಾರೆ. ಈಗ ಅಲ್ಲಿಯ ನಾಯಕರು ಅವರನ್ನು ಬಿಡಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಗೋಮಾಳ ಭೂಮಿಯಾಗಿರುವುದರಿಂದ ಅವಶ್ಯಕತೆ ಇದ್ದರೂ ಸಹ ಬೇರೆಯವರಿಗೆ ಕೊಡುವುದಕ್ಕೆ ಬರುವುದಿಲ್ಲ. ಜಿಲ್ಲಾಧಿಕಾರಿಗಳು ಸ್ವತಃ ಹೋಗಿದ್ದಾರೆ. ಲೋಕಲ್ ಇನ್ಸ್‌ಪೆಕ್ಷನ್ ಮಾಡಿದ್ದಾರೆ, ಅಲ್ಲಿ ನಷ್ಟವಾಗಿದೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಕೊಡಲಿಕ್ಕೆ ಸಾಧ್ಯವಾದರೆ ಪರಿಶೀಲನೆ ಮಾಡಿ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪರಿಹಾರವನ್ನು ಕೊಡಲಿಕ್ಕೆ ಬರುತ್ತದೆ ಸ್ವಾಮಿ ನಿಮಗೆ ಗೊತ್ತಿರುವ ಹಾಗೆ ಸರ್ಕಾರಿ ಭೂಮಿಯಲ್ಲಿ ಜೋಪಡಿ ಇದ್ದು ಅದು ಸುಟ್ಟುಹೋದರೆ ಪರಿಹಾರವನ್ನು ಕೊಡುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹ್ಯುಮಾನಿಟೇರಿಯನ್ ಗ್ರೌಂಡ್ಸ್ ಮೇಲೆ ಪರಿಹಾರ ಕೊಡಲಿಕ್ಕೆ ಸಾಧ್ಯವಾದರೆ ಅದನ್ನು ಕನ್ಸಿಡರ್ ಮಾಡುತ್ತೇನೆ. ಆಲ್ಲಿರತಕ್ಕ ಸಮಸ್ಯೆ ಬಗ್ಗೆ ಆ ಭಾಗದ ಶಾಸಕರು, ಜಿಲ್ಲಾ ಮಂತ್ರಿಗಳು, ಆ ಊರಿನ ಹಳ್ಳಿಯ ಜನರನ್ನು ಕರೆಸಿ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು. ಇದು ಗಟ್ಟಿತನೇ ಇಸವಿಯಿಂದ ನಡೆಯುತ್ತಿದೆ. ಗೋಮಾಳಕ್ಕೆ ಎಷ್ಟು ಭೂಮಿಯನ್ನು ಬಿಡಬೇಕು, ಭೂಮಿಯನ್ನು ಪಡೆದುಕೊಂಡಿರುವವರಲ್ಲಿ ಸರ್ಕಾರಿ ನೌಕರರ ಸಂಬಂಧೀಕರಿರುವರೇ ಎಂಬುದನ್ನು ನೋಡುತ್ತೇನೆ. ಆ ಸಭೆಗೆ ಮಾನ್ಯ ಪಂಪಾಪತಿಯವರನ್ನು ಕರೆಯುತ್ತೇನೆ, ಅದನ್ನು ಇತ್ಯರ್ಥ ಮಾಡತಕ್ಕ ಆಲೋಚನೆ ಮಾಡುತ್ತಿದ್ದೇನೆ ಅದನ್ನು ಮಾಡುತ್ತೇನೆ.

ಶ್ರೀ ಪಂಪಾಪತಿ.—ಭೂಮಿಯನ್ನು ಕೊಡಲಿಕ್ಕೆ ಏನೂ ತೊಂದರೆಯಿಲ್ಲ. ಅಲ್ಲಿ ಬೆಟ್ಟಗುಡ್ಡ ಭೂಮಿ ಇದೆ. ಇದರಿಂದ ತೊಂದರೆಯಾಗುತ್ತದೆ. ಜನ ಊರುಬಿಟ್ಟು ಹೋಗಲೇಬೇಕಾಗುತ್ತದೆ. ಹಿಂದಿನ ಸರ್ಕಾರಗಳು ಕೊಟ್ಟಿದ್ದು ಹತ್ತು ಐದಾರು ವರ್ಷ ಸುಮ್ಮನಿದ್ದು ಈಗ ಬಂದು ಅವರನ್ನು ಹೊರತಳ್ಳುತ್ತಿರುವುದು...

ಅಧ್ಯಕ್ಷರು.—ಶ್ರೀ ಪಂಪಾಪತಿಯವರೇ ಯಾಕೆ ಹೀಗೆ ಮಾಡ್ತೀರಿ ? ಅವರು ಸರಿಯಾದ ಉತ್ತರವನ್ನು ಹೇಳಿದ್ದಾರೆ.

ಶ್ರೀ ಪಂಪಾಪತಿ.—ಅಲ್ಲಿಂದ ಓಡಿಸುತ್ತಾರೆ. ಆ ಜನ ಎಲ್ಲಿಗೆ ಹೋಗಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೋಡಿ. ಲೀಗಲ್ ಆಗಿ ನೋಟೀಸ್ ಕೊಟ್ಟು ಎವಿಕ್ಷನ್ ಆಗಬೇಕಾಗುತ್ತದೆ. ಆ ರೀತಿ ಓಡಿಸುವುದಕ್ಕೆ ಆಗುವುದಿಲ್ಲ. ಕಾನೂನು ಪ್ರಕಾರ ಹೋಗಬೇಕಾಗುತ್ತದೆ.

ನಿಯಮ ೩೩೪ರ ಮೇರೆಗೆ

೧) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಗೋ ಆಸ್ಪತ್ರೆ ಹಾಗೂ ಆರೋಗ್ಯ ಘಟಕಗಳ ರಿಪೇರಿ ಕೆಲಸಗಳನ್ನು ಮಾಡಲು ಒತ್ತಾಯ.

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿಯ ಗೋ ಆಸ್ಪತ್ರೆ ಮತ್ತು ಆರೋಗ್ಯ ಘಟಕಗಳ ರಿಪೇರಿಗಳ ಬಗ್ಗೆ ಸರಕಾರ ಈ ತನಕ ಪಿಡಬ್ಲ್ಯೂಡಿ ಇಲಾಖೆಗೆ ಅಥವಾ ಜಿಲ್ಲಾ ಪರಿಷತ್‌ಗಾಗಲೀ ಆದೇಶ ಕೊಡಲಿಲ್ಲ. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿಯ ಈ ಆಸ್ಪತ್ರೆಗಳು ಬಹಳ ನಾದುರಸ್ತಿಯಲ್ಲಿದೆ. ಈ ಬಗ್ಗೆ ಸರಕಾರವು ಕೂಡಲೇ ಪರಿಶೀಲಿಸಿ ಈ ಆಸ್ಪತ್ರೆಯ ದುರಸ್ತಿಗಳ ಬಗ್ಗೆ ಸೂಕ್ತ ಆದೇಶವನ್ನು ಕೊಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಗೋ ಆಸ್ಪತ್ರೆ ಮತ್ತು ಆರೋಗ್ಯ ಘಟಕಗಳ ದುರಸ್ತಿ ಕೆಲಸಗಳನ್ನು ಕೂಡಲೇ ಮಾಡಿಸ ಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೆಲ್ತ್ ಮಿನಿಸ್ಟ್ರು ಆ ಮನೇಲಿದ್ದಾರೆ, ಉತ್ತರ ತರಿಸಿಕೊಡುತ್ತೇನೆ ಸ್ವಾಮಿ.

SRI VASANTHA V. SALIANA.—I am not getting any reply to my matters raised under 334.